ಇತ್ತ ಸುಕನ್ಯಾಳನ್ನು ಚಿತೆಯ ಮೇಲೆ ಮಲಗಿಸಲು ಸಾಧ್ಯವೇ ಇಲ್ಲ ಎಂದು ಆಕೆಯನ್ನು ಕರೆದುಕೊಂಡು ಆಕೆಯ ಅಮ್ಮ ಶೂಟಿಂಗ್ ಸ್ಪಾಟಿನಿಂದ ಹೋಗಿಯೇ ಬಿಟ್ಟಿದ್ದಳು. ಇತ್ತ, ಪಂಕಜ್‌ಕುಮಾರ್‌ನನ್ನು ಮಾತಾಡಿಸಲು ಬಿಡದೇ ಕಡ್ಡಿ ವಾಸು ಆತನನ್ನು ವ್ಯಾನಿಟಿ ವ್ಯಾನ್‌ನಲ್ಲಿ ಕೂಡಿ ಹಾಕಿ, ಅದರೆದುರು ಸರ್ಪದಂತೆ ಕಾಯುತ್ತಲೇ ಇದ್ದ.

ಲಕ್ಷ್ಮಿ ಮಲಗಿಯೇ ಇದ್ದಳು ಚಿತೆಯ ಮೇಲೆ. ಅಷ್ಟು ಹೊತ್ತಿಗೆ ಮಧ್ಯಾಹ್ನದ ಒಂದು ಗಂಟೆಯಾಯಿತು. ಊಟ ರೆಡಿ ಎಂದು ಪ್ರೊಡಕ್ಷನ್ ಬಾಯ್ಸ್ ಮ್ಯಾನೇಜರ್‌ಗೆ ಹೇಳಿದರು. ಮ್ಯಾನೇಜರ್ ಅಸೋಸಿಯೇಟ್ ಡೈರೆಕ್ಟರ್‌ಗೆ ಹೇಳಿದ, ಅಸೋಸಿಯೇಟ್ ಡೈರೆಕ್ಟರ್ ಬಂದು ಡೈರೆಕ್ಟರ್ ಎದುರು ನಿಂತ. ಡೈರೆಕ್ಟರ್‌ಗೆ ಒಂದು ಉಪಾಯ ಹೊಳೆಯಿತು.

ಊಟದ ಬ್ರೇಕ್ ಅನೌನ್ಸ್ ಆಯಿತು. ಹೀರೊ ಹೀರೊಯಿನ್ ಕಿತ್ತಾಟದಲ್ಲಿ ಊಟ ಬಂದಿದ್ದರೂ ಅದನ್ನು ಸಕಾಲಕ್ಕೆ ತಿನ್ನುವ ಭಾಗ್ಯ ಸಿಗಲಿಕ್ಕಿಲ್ಲ ಎಂದು ಸ್ವಲ್ಪ ಹತಾಶರಾಗಿದ್ದ ಎಲ್ಲರೂ ಸಮಾಧಾನದ ನಿಟ್ಟುಸಿರು ಬಿಟ್ಟು, ತಮ್ಮ ಕೈಗಳಿದ್ದ ಸಾಮಾನು ಸರಂಜಾಮುಗಳನ್ನು ಅಲ್ಲಿಯೇ ಬಿಸಾಕಿ ಊಟಕ್ಕೆ ಹೊರಟೇ ಬಿಟ್ಟರು. ಚಿತೆಯ ಬಳಿಗೆ ಕೋಲಿನ ದೊಂದಿಗೆ ಎಣ್ಣೆ ಸುರಿದು ಬೆಂಕಿ ಹಚ್ಚಿ ಹೀರೊ ಕೈಗೆ ನೀಡಬೇಕಾದ ಡ್ಯೂಟಿಯ ಮೇಲಿದ್ದ ಇಬ್ಬರು ಹುಡುಗರು ಪಂಜನ್ನು ಅಲ್ಲಿಯೇ ಚಿತೆಗೆ ಆನಿಸಿಟ್ಟು ಊಟಕ್ಕೆ ಹೊರಟು ಹೋದರು.

ಲಕ್ಷ್ಮಿ ಮಾತ್ರ ಮಲಗಿಯೇ ಇದ್ದಳು ಚಿತೆಯ ಮೇಲೆ, ಸೌದೆಗಳನ್ನು ಎದೆಯ ಮೇಲೆ ಹೊತ್ತು. ಆಕೆಯನ್ನೂ ಊಟಕ್ಕಾಗಿ ಎಬ್ಬಿಸಬಹುದಲ್ಲ ಎಂದು ಒಬ್ಬ ಅಂದಿದ್ದು ಕೇಳಿದ ಲಕ್ಷ್ಮಿಗೆ ತುಸು ಆಸೆ ಮೂಡಿತ್ತು, ಆದರೆ, ಏಯ್ ಅದೆಲ್ಲಾ ನಮಗ್ಯಾಕೆ, ಒಮ್ಮೆ ಅಲ್ಲಿಂದ ಎದ್ದರೆ, ಮತ್ತೆ ಆಕೆಯನ್ನು ಹೆಣವಾಗಿ ರೆಡಿ ಮಾಡೋದಕ್ಕೆ ಸಕತ್ ಟೈಮ್ ಹಿಡಿತ್ತೈತೆ ಎಂದದ್ದು ಕೇಳಿ ಎದೆ ಧಸಕ್ಕೆಂದಿತು. ಅಣ್ಣಾ ಎಂದು ಕರೆದ ದುರ್ಬಲ ಧ್ವನಿ ಅವರ್‍ಯಾರ ಕಿವಿಯ ಮೇಲೂ ಬೀಳಲಿಲ್ಲ.

ಹಸಿವಿನಿಂದ ಕಂಗಾಲಾಗಿದ್ದ ಲಕ್ಷ್ಮಿಯ ಹೊಟ್ಟೆಯಲ್ಲಿದ್ದ ಮಗು ಬಂಡಾಯ ಹೂಡುತ್ತಿತ್ತು. ಆಕೆ ಚಿತೆಯ ಮೇಲೆ ಮಲಗಿಯೇ ಇದ್ದಳು. ವಂದಿಮಾಗಧರೊಂದಿಗೆ, ಸಹಾಯಕರೊಂದಿಗೆ ಆಗಮಿಸಿ, ಸುತ್ತುವರಿದ ಫ್ಯಾನುಗಳಿಗೆ ಆಟೋಗ್ರಾಫ್ ಕೊಟ್ಟು, ಸೆಲ್ಫಿಗಳಿಗೆ ಮುಖವೊಡ್ಡಿ, ಅವೆಲ್ಲವೂ ಮುಗಿದ ನಂತರವಾದರೂ ಬೆಳಗ್ಗೆಯಿಂದ ಕಾದಿದ್ದ ಒಂದೇ ಒಂದು ಶಾಟ್‌ಗಾಗಿ ಬರಬೇಕಾಗಿದ್ದ ಸ್ಟಾರ್ ಮಾತ್ರ ಇನ್ನೂ ಬಂದೇ ಇರಲಿಲ್ಲ. ಬಿಸಿಲಿನ ತಾಪಕ್ಕೆ ಆಕೆಯ ಮೈಯೆಲ್ಲ ಬೆವರಿತ್ತು, ಉಟ್ಟಿದ್ದ, ಸುತ್ತಿದ್ದ ಬಟ್ಟೆಯೆಲ್ಲವೂ ಒದ್ದೆಯಾಗಿದ್ದವು. ಆದರೂ, ತಾರೆಯ ಆಗಮನವಾಗಲೇ ಇಲ್ಲ. ಒಂದು ಕಾಳಿನಷ್ಟೂ ಮೋಡವಿಲ್ಲದ ಸ್ವಚ್ಛ, ಕ್ರೂರ, ನೀಲಿ ಆಗಸವನ್ನು ದಿಟ್ಟಿಸುತ್ತಾ ಲಕ್ಷ್ಮಿ ಚಿತೆಯ ಮೇಲೆ ಮಲಗಿಯೇ ಇದ್ದಳು.

## ಎಂ. ಅಬ್ದುಲ್ ರೆಹಮಾನ್ ಪಾಷ

ಕತೆಗಾರರು ಭಾಷಾವಿಜ್ಞಾನಿ, ಅನುವಾದಕ, ಸಿನಿಮಾ–ರಂಗಭೂಮಿ ಸಾಹಿತಿ, ನಿರ್ದೇಶಕ, ಶಿಕ್ಷಣ ಮಾಧ್ಯಮ ತಜ್ಞ, ಜೀವನ–ಸಂವಹನ ಕೌಶಲ ತರಬೇತಿದಾರರು. ಏಳು ಅನುವಾದಗಳೂ ಸೇರಿದ ಹಾಗೆ 42ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. 180 ಸಾಕ್ಷ್ಯಚಿತ್ರ, 63 ಶೈಕ್ಷಣಿಕ ಚಿತ್ರ, ನಾಲ್ಕು ಕಥಾಚಿತ್ರಗಳಿಗೆ ಕೆಲಸ ಮಾಡಿದ್ದಾರೆ. ನಾಲ್ಕು ವಿಶ್ವವಿದ್ಯಾಲಯಗಳಿಗೆ ಸಂದರ್ಶಕ ಪ್ರಾಧ್ಯಾಪಕರು. ಮೈಸೂರಿನ ಭಾರತೀಯ ಭಾಷಾ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಆಕಾಶವಾಣಿಯ ಸೇವೆಯ ಬಳಿಕ ಸ್ವತಂತ್ರ ವೃತ್ತಿಯಲ್ಲಿದ್ದಾರೆ.